ಸ್ಪಷ್ಟೀಕರಣಕ್ಕೆ ನಿಲುಕದ ಧ್ವನಿಯೊಂದು ಮೂಡಿ ಬಂದಲ್ಲಿ ಅದು ಖಚಿತವಾಗಿಯು ಧಾಬಿನ್‌ಳದ್ದು ಎಂದು ಆಕೆಯ ಅಂತಿಮ ತೀರ್ಮಾನವಾಗಿರುತ್ತಿದ್ದು, ಧಾಬಿನ್ ಎಂದರೆ ಶ್ರೀಮತಿ ನಾಗರ ಹಾವು. ನಾಗರ ಹಾವುಗಿಂತಲೂ ಧಾಬಿನ್ ಎಂಬುವಾಕೆ ಅಂದರೆ ಅದರ ಪತ್ನಿ ತೀರಾ ವಿಷಯುಕ್ತವೆಂತಲೂ ತನ್ನ ಮೊಟ್ಟೆ ಹಾಗೂ ಮರಿಗಳಿಗೆ ಏನಾದರೂ ಹೆಚ್ಚು ಕಡಿಮೆಯಾದಲ್ಲಿ ಆಕೆಯೇ ಸಂಬಂಧ ಪಟ್ಟವರ ಮೇಲೆ ಸೇಡನ್ನು ಪೋಷಿಸಿ ದ್ವೇಷವನ್ನು ತೀರಿಸಿಕೊಳ್ಳುವಾಕೆ.

ಅಷ್ಟೆ ಅಲ್ಲದೇ ಹೆಣ್ಣುಮಕ್ಕಳು ಮುಟ್ಟಿನ ಬಟ್ಟೆಯನ್ನು ಒಗೆಯದೆ ಹಾಗೆಯೇ ಬಿಸಾಕಿದಲ್ಲಿ ಅದರ ದರ್ಶನ ಮಾತ್ರದಿಂದಲೇ ಧಾಬಿನ್‌ಳ ಕಣ್ಣು ಕುರುಡಾಗುವುದೆಂತಲೂ ಮತ್ತು ಆಕೆಯು ನೀಡುವ ಶಾಪದಿಂದ ಹಾಗೆ ಮುಟ್ಟಿನ ಬಟ್ಟೆಯನ್ನು ಬಿಸಾಡುವ ಹೆಣ್ಣುಮಕ್ಕಳಿಗೆ ಮಕ್ಕಳಾಗುವುದಿಲ್ಲವೆಂತಲೂ ಬಲವಾಗಿ ನಂಬಿದ್ದಳು. ಇದು ಆಕೆಗೆ ಸಹಜವಾಗಿ ಪ್ರಾಪ್ತಿಯಾದ ಜ್ಞಾನವಾಗಿರಲಿಲ್ಲ. ಬದಲಿಗೆ ತಲೆತಲಾಂತರದಿಂದ ಅವಳ ಕುಟುಂಬದ ಹೆಣ್ಣು ಹಿರಿತಲೆಗಳು ಒಬ್ಬರಿಂದ ಒಬ್ಬರಿಗೆ ದಾಟಿಸುತ್ತಾ ಬಂದಿದ್ದ ಜ್ಞಾನದ ಬಳುವಳಿಯಾಗಿತ್ತು. ಆದರೆ ಈಗ ಆವಳ ಜ್ಞಾನವನ್ನು ಎರವಲು ಪಡೆಯಲು ಯಾವ ಕೈಗಳು ಕೂಡಾ ಸಿದ್ಧವಿರಲಿಲ್ಲ.

ನಸೀಮಾ ಇದ್ದಾಗಿನ ಮಾತು ಬೇರೆ. ಜೀನತ್‌ಳ ಪ್ರತಿಯೊಂದು ಮಾತನ್ನು ಕೂಡಾ ತುಂಬಾ ಪ್ರೀತಿಯಿಂದ ಅವಳು ಸ್ವೀಕರಿಸುತ್ತಿದ್ದಳು. ಮುಟ್ಟಾದಾಗಲಂತೂ ಅವಳು ವಹಿಸುತ್ತಿದ್ದ ಎಚ್ಚರಿಕೆಯಂತೂ ಹೇಳಲಸಾಧ್ಯ. ಮೊದಲನೆಯದಾಗಿ ಅವಳು ಪದವೀಧರೆಯಾದರೂ ಸಾಕಷ್ಟು ಲಕ್ಷಣವಾಗಿದ್ದರೂ ಅವಳ ಹುಟ್ಟಿನ ಪ್ರಸಂಗವು ಅವಳ ಬದುಕಿಗೆ ಹಿನ್ನಡೆಯಾಯಿತು. ಜೀನತ್ ಇಷ್ಟ ಪಟ್ಟ ಹುಡುಗರ ಅಂತಸ್ತಿನಲ್ಲಿ ನಸೀಮಾಗೆ ಪ್ರವೇಶ ಸಿಗಲಿಲ್ಲ. ಒಪ್ಪಿ ಬಂದವರ ಅಂತಸ್ತು ಜೀನತ್‌ಗೆ ಪಸಂದಾಗಲಿಲ್ಲ. ಅವಳ ಮನಸ್ಸು ಕೊನೆಗೂ ನಸೀಮಾಳ ನೆನಪಿನ ಕಗ್ಗಂಟಿನಲ್ಲಿ ಸಿಲುಕಿಕೊಂಡಿತು.

ಅವಳ ವಿಶಾಲವಾದ ಮನೆಯ ಗೇಟಿನ ಬಳಿ ಮಧ್ಯರಾತ್ರಿ ಅಳುತ್ತಿದ್ದ ಮಗುವಿನ ಕೂಗು ಅವಳಿಗೆ ತಲುಪಿ, ಅವಳು ತನ್ನ ಎಂದಿನ ಚುರುಕುತನದಿಂದ ಧಾವಿಸಿ ಬರುವುದರೊಳಗೆ ಒಂದೆರಡು ನಾಯಿಗಳು ಅಲ್ಲಿ ಆ ಬಟ್ಟೆಯ ಪಿಂಡಿಯನ್ನು ಮೂಸುತ್ತಿದ್ದವು. ಅವಳು 'ಹಚಾ ಹಚಾ' ಎನ್ನುವಷ್ಟರಲ್ಲಿ ಒಂದು ನಾಯಿಯಂತೂ ಅವಳ ಮೇಲೆಯೇ ಏರಿ ಬಂದಿತ್ತು. ಹಿಂದೆಯೇ ಇದ್ದ ಅವಳ ಗಂಡ ಆ ನಾಯಿಯನ್ನು ಓಡಿಸುವಷ್ಟರಲ್ಲಿ ಹೊಕ್ಕುಳಬಳ್ಳಿಯನ್ನು ಕೂಡಾ ಕತ್ತರಿಸದ ಆ ಮಗುವನ್ನು ಅವಳು ಬಿಗಿದಪ್ಪಿದಳು. ಇಬ್ಬರು ಗಂಡು ಮಕ್ಕಳ ಪಾಲನೆ ಪೋಷಣೆ ಅವಳಿಗೆ ಯಾವ ಸಂತೃಪ್ತಿಯನ್ನೂ ಕೊಟ್ಟಿರಲಿಲ್ಲ. ಅಲ್ಲಾಹನೇ ಖುದ್ದು ತನ್ನ ಅಹವಾಲನ್ನು ಆಲಿಸಿ ತನ್ನ ನೋವನ್ನು ಪರಿಹರಿಸಿದ ಎಂದು ಅವಳು ಇನ್ನೊಮ್ಮೆ ಆ ಕೂಸನ್ನು ಬಾಚಿ ತಬ್ಬಿದಳು. "ನಸೀಮಾ ನಸೀಮಾ..." ಅದನ್ನು ಸ್ಪರ್ಶಿಸಿದರೆ ಸಾಕು ಅವಳ ಮೈ ರೋಮಾಂಚನಗೊಳ್ಳುತ್ತಿತ್ತು. ಅದಕ್ಕೆ ಉಡಿಸಿ, ತೊಡಿಸಿ, ಲಾಲಿಸಿ ಅವಳು ತೃಪ್ತಿಯನ್ನು ಮತ್ತು ಬದುಕಿನಲ್ಲಿ ಅಪಾರ ಉತ್ಸಾಹವನ್ನು ಕಂಡುಕೊಂಡಳು. ಸಾದಿಕ್ ಮತ್ತು ಅನೀಸ್‌ಗಿಂತ ಒಂದು ಕೈ ಮೇಲಾಗಿ ಅವಳ ಪ್ರೀತಿ ನಸೀಮಾಳತ್ತ ಹರಿಯಿತು.

ನಸೀಮಾ ಬೆಳೆಯುತ್ತಾ ಕಣ್ಣು ಕುಕ್ಕುವಂತೆ ಕಂಡು ಬಂದರೂ ಅವಳಿಗೆ ಸೂಕ್ತ ವರ ಸಿಗುವುದು ಕಷ್ಟದ ವಿಷಯವಾಯಿತು. ಅಸಹಾಯಕಳಾದ ಅವಳ ಮನದಲ್ಲಿ ನಸೀಮಾಳನ್ನು ತನ್ನ ಮಗನಾದ ಅನೀಸ್‌ನೊಡನೆ ಮದುವೆ ಮಾಡಿದರೆ ಹೇಗೆ ಎಂಬ ಆಲೋಚನೆ ಕೂಡಾ ಹಾದು ಹೋಯಿತು. ಆದರೆ ಖುದ್ದು ಅವಳಿಗೇ ಆ ವಿಷಯವು ಸರಿ ಕಂಡು ಬಾರದೆ ಇದ್ದುದರಿಂದ ತನ್ನ ಹುಡುಕಾಟವನ್ನು ಮುಂದುವರೆಸಿದಳು.

"ಭಯ್ಯ... ಭಯ್ಯ..." ಎಂದು ಅವನ ಹಿಂದೆ ಮುಂದೆ ಸುಳಿಯುತ್ತಾ ಅವನ ಸಕಲ ಕೆಲಸಕಾರ್ಯಗಳನ್ನು ಓಡು ಹೆಜ್ಜೆಯಲ್ಲಿ ಮಾಡುತ್ತಾ ಕಣ್ಣು ಬಿಟ್ಟಾಗಿನಿಂದ ಅವನ ವಾತ್ಸಲ್ಯದಲ್ಲಿ